ಅ) *ಪ್ರೌಢಶಾಲಾ ಶಿಕ್ಷಕರ ಬೇಡಿಕೆಗಳ ಬಗ್ಗೆ ಸರ್ಕಾರದವರು ತೆಗೆದುಕೊಂಡ ನಿರ್ಣಯಗಳೇನು?*

ಇ) *ಶಿಕ್ಷಕರ ಬಡ್ತಿ ಮತ್ತು ವೇತನ ತಾರತಮ್ಯ ನೀಗಿಸಲು ಸರ್ಕಾರದವರ ನಿಲುವೇನು?*

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

ಅ) ಹೌದು.

ಆ) ಜೂನಿಯರ್ ಟೆಕ್ನಿಕಲ್ ಶಾಲಾ ಶಿಕ್ಷಕರ ವೇತನಕ್ಕೆ ಸಮಾನವಾದ ವೇತನ ಶ್ರೇಣಿಯನ್ನು ನೀಡಬೇಕೆಂಬ ಬೇಡಿಕೆಯ ಬಗ್ಗೆ ಈಗಾಗಲೇ ಪರಿಶೀಲಿಸಿ ತಿರಸ್ಕರಿಸಲಾಗಿದೆ. ಖಾಸಗಿ ಶಾಲಾ ಕಾಲೇಜುಗಳನ್ನು ರಾಷ್ಟ್ರೀಕರಣಗೊಳಿಸಬೇಕೆಂಬ ಬೇಡಿಕೆಯನ್ನು ತಿರಸ್ಕರಿಸಲಾಗಿದೆ. 20 ವರ್ಷ ಸೇವೆ ಸಲ್ಲಿಸಿರುವ ಪ್ರೌಢಶಾಲಾ ಸಹಶಿಕ್ಷಕರಿಗೆ ಗ್ರೇಡ್-1 ವೇತನ ಶ್ರೇಣಿ ನೀಡುವ ಬಗ್ಗೆ ಆದೇಶ ಹೊರಡಿಸಿದೆ. ಸರ್ಕಾರಿ ಸಂಯುಕ್ತ ಪದವಿ ಪೂರ್ವಕಾಲೇಜುಗಳ ವಿದ್ಯಾರ್ಥಿಗಳ ಸಂಖ್ಯೆ 750ಕ್ಕಿಂತ ಹೆಚ್ಚಿರುವ ಪದವಿ ಪೂರ್ವ ಕಾಲೇಜುಗಳಲ್ಲಿ ಉಪ ಪ್ರಾಂಶುಪಾಲರ ಹುದ್ದೆಯನ್ನು ಸೃಜಿಸಿ ಆದೇಶ ಹೊರಡಿಸಲಾಗಿದೆ. ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಸಂಸ್ಥೆಯವರು ನಡೆಸುತ್ತಿರುವ ಶಾಶ್ವತ ಅನುದಾನ ರಹಿತ ಶಾಲಾ ಕಾಲೇಜುಗಳಿಗೆ ಅನುದಾನ ನೀಡಬೇಕೆಂಬ ವಿಷಯವು ಸಚಿವ ಸಂಪುಟದ ಪರಿಶೀಲನೆಯಲ್ಲಿದೆ. 1995ರಿಂದ ಈಚೆಗೆ ನಿವೃತ್ತರಾದವರಿಗೆ ಶೇ. 90ರಷ್ಟು ತುಟ್ಟಿಭತ್ಯೆಯನ್ನು ವೇತನದಲ್ಲಿ ವಿಲೀನಗೊಳಿಸುವ ಮತ್ತು 5 ಸ್ಥಗಿತ ವೇತನ ಬಡ್ತಿ ಸೌಲಭ್ಯವನ್ನು ಅನುದಾನಿತ ಶಿಕ್ಷಣ ಸಂಸ್ಥೆಗಳಿಗೂ ವಿಸ್ತರಿಸುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಇ) 20 ವರ್ಷ ಸೇವೆ ಸಲ್ಲಿಸಿದ ಎಲ್ಲಾ ಸಹ ಶಿಕ್ಷಕರಿಗೆ ಗ್ರೇಡ್-1 ವೇತನ ಶ್ರೇಣಿ ನೀಡುವ ಬಗ್ಗೆ ಸರ್ಕಾರಿ ಆದೇಶ ಹೊರಡಿಸಲಾಗಿದೆ. ಮುಖ್ಯೋಪಾಧ್ಯಾಯರ ಹುದ್ದೆಯನ್ನು ಬಡ್ತಿಯಿಂದಲೇ ತುಂಬಬೇಕೆಂಬ ಸಂಘದ ಬೇಡಿಕೆಯನ್ನು ಒಪ್ಪಲು ಸಾಧ್ಯವಿಲ್ಲ. 1982ರಿಂದ ಪೂರ್ವಾನ್ವಯ ವಾಗುವಂತೆ ವೇತನ ಪರಿಷ್ಕರಣೆ ಮಾಡಬೇಕೆಂಬ ಸಂಘದ ಬೇಡಿಕೆಯನ್ನು ಒಪ್ಪಲು ಸಾಧ್ಯವಿಲ್ಲ.

ಗುಲ್ಬರ್ಗಾ ಜಿಲ್ಲೆ ಕಮಲಾಪುರ ಕ್ಷೇತ್ರದಲ್ಲಿರುವ ಸ್ಕೂಲುಗಳಿಗೆ ಸ್ವಂತ ಕಟ್ಟಡ ನಿರ್ಮಾಣ

753 - ಶ್ರೀ ರೇವುನಾಯಕ್ ಬೆಳಂಖಿ (ಕಮಲಾಪುರ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಗುಲ್ಬರ್ಗಾ ಜಿಲ್ಲೆ ಕಮಲಾಪುರ ಮೀಸಲಾತಿ ಕ್ಷೇತ್ರದಲ್ಲಿ ಮಟಗಿ ಗ್ರಾಮ ಆಳಂದಾ, ಮುದಡಗಾ ಸ್ವಂತ ನಾಗೂರು, ವಿ.ಕೆ.ಸಲ್ಗದ (ಪ.ಪೂ.ಕಾ) ನಕೋಳ ಈ ಗ್ರಾಮಗಳಲ್ಲಿರುವ ಹೈಸ್ಕೂಲ್‌ಗಳಿಗೆ ಸ್ವಂತ ಕಟ್ಟಡಗಳಿಲ್ಲದೇ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ*

ಆ) *ಹಾಗಿದ್ದಲ್ಲಿ ಕಟ್ಟಡವನ್ನು ನಿರ್ಮಿಸಲು ಯಾವಾಗ ಪ್ರಾರಂಭ ಮಾಡಲಾಗುವುದು?*

ಇ) *ಮುಂದಿನ ಸಾಲಿನಲ್ಲಿ ಇದಕ್ಕಾಗಿ ಮೀಸಲಿಡುವ ಹಣವೆಷ್ಟು?*

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು) :

ಅ) ಬಂದಿದೆ.

ಆ) ಜಿಲ್ಲಾಪಂಚಾಯತ್‌ನವರು ಈ ಬಗ್ಗೆ ಒದಗಿಸುವ ಆಯವ್ಯಯದ ಹಣದಲ್ಲಿ ಆದಷ್ಟು ಶೀಘ್ರವಾಗಿ ಕಟ್ಟಡ ನಿರ್ಮಿಸಲು ಕ್ರಮ ಕೈಗೊಳ್ಳಲಾಗುವುದು.

ಇ) 1997-98ನೇ ಸಾಲಿನ ಈ ಬಾಬ್ತು ಗುಲ್ಬರ್ಗಾ ಜಿಲ್ಲೆಗೆ ಆಯವ್ಯಯದಲ್ಲಿ ಹಣ ಒದಗಿಸುವುದನ್ನು ಅವಲಂಬಿಸಿ ಇದಕ್ಕೆ ಹಣವನ್ನು ಮೀಸಲಿರಿಸಲಾಗುವುದು.

ಅನಧಿಕೃತ ಟಿ.ಸಿ.ಹೆಚ್ ಸಂಸ್ಥೆಗಳಲ್ಲಿ ವ್ಯಾಸಾಂಗ ಮಾಡಿರುವ ವಿದ್ಯಾರ್ಥಿಗಳ ಭವಿಷ್ಯ.

754 - ಶ್ರೀ ರೇವುನಾಯಕ್ ಬೆಳಂಬಗಿ (ಕಮಲಾಪುರ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕದಲ್ಲಿ ಅನಧಿಕೃತವಾಗಿ ನಡೆಯುತ್ತಿರುವ ಟಿ.ಸಿ.ಹೆಚ್. ಸಂಸ್ಥೆಗಳ ಸಂಖ್ಯೆ ? (ವಿವರಣೆ ಪಟ್ಟಿ ನೀಡುವುದು)

ಆ) 1993-94 ರಿಂದ ಅನಧಿಕೃತವಾಗಿ ಪ್ರಾರಂಭಿಸಿರುವ ಟಿ.ಸಿ.ಹೆಚ್ ಸಂಸ್ಥೆಗಳಿಗೆ ಸರ್ಕಾರ ಮಾನ್ಯತೆ ನೀಡುವುದೇ?

ಇ) 1993-94 ರಿಂದ ಈವರೆಗೆ ಅನಧಿಕೃತ ಟಿ.ಸಿ.ಹೆಚ್ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡಿರುವ ವಿದ್ಯಾರ್ಥಿಗಳ ಭವಿಷ್ಯದ ಬಗ್ಗೆ ಸರ್ಕಾರದ ನಿಲುವೇನು?

ಈ) ಕೆಲವು ಅನಧಿಕೃತ ಶಿಕ್ಷಣ ಸಂಸ್ಥೆಗಳಲ್ಲಿ ತರಬೇತಿಗಾಗಿ ಸೇರಿದ ಪ್ರಶಿಕ್ಷಣಾರ್ಥಿಗಳ ಪರೀಕ್ಷೆ ಆಗದಿರುವುದಕ್ಕೆ ಕಾರಣವೇನು?

ಉ) ಬೀದರ್ ಜಿಲ್ಲೆಯ ಬಸವಕಲ್ಯಾಣದಲ್ಲಿ ಅನಧಿಕೃತವಾಗಿ ಪ್ರಾರಂಭಿಸಿರುವ ಹೊನ್ನನಾಯಕ್ ಜನತಾ ಶಿಕ್ಷಣ ಸಂಸ್ಥೆಯ ಟಿ.ಸಿ.ಹೆಚ್. ಅಭ್ಯರ್ಥಿಗಳಿಗೆ ಪರೀಕ್ಷೆಗೆ ಏಕೆ ಅವಕಾಶ ನೀಡಿಲ್ಲ?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಇ) ಎಲ್ಲ ಅನಧಿಕೃತ ಟಿ.ಸಿ.ಹೆಚ್ ಸಂಸ್ಥೆಗಳನ್ನು ಮುಚ್ಚಲಾಗಿದ್ದು ವಿದ್ಯಾರ್ಥಿಗಳ ವ್ಯಾಸಂಗವನ್ನು ಮುಂದುವರೆಸಲು ಅನುವಾಗುವಂತೆ ವಿಶೇಷ ಕಾರ್ಯೋಜನೆಯನ್ನು ರೂಪಿಸಿ ಜಾರಿಗೊಳಿಸಲಾಗಿದೆ. ಅದಾಗ್ಯು 1993-94, ಮತ್ತು 1994-95ನೇ ಸಾಲಿನಲ್ಲಿ ಅನಧಿಕೃತ ಶಿಕ್ಷಣ ತರಬೇತಿ ಕೇಂದ್ರಗಳಲ್ಲಿ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳು ಮತ್ತು ಅಧಿಕೃತ ಶಿಕ್ಷಣ ತರಬೇತಿ ಕೇಂದ್ರಗಳಲ್ಲಿ ಹೆಚ್ಚುವರಿಯಾಗಿ ದಾಖಲಾದ ವಿದ್ಯಾರ್ಥಿಗಳೂ ಸೇರಿದಂತೆ ಒಟ್ಟು 11,288 ವಿದ್ಯಾರ್ಥಿಗಳಿಗೆ ಏಪ್ರಿಲ್'94, ಡಿಸೆಂಬರ್'95 ಮತ್ತು ಡಿಸೆಂಬರ್ 96ರಲ್ಲಿ ಪರೀಕ್ಷೆಯನ್ನು ನಡೆಸಲಾಗಿದೆ.